■ ವಿಶಾಖ ಎನ್.

# ಪ್ರಶಸ್ತಿಯ ಪುಳಕದಲ್ಲಿ ನಿತ್ಯಾ



ಪರದೇಶ. ಮೀನುಗಾರನೊಬ್ಬ ಕೊಕ್ಕೆ ಹಾಕಿಕೊಂಡು ಕುಳಿತಿದ್ದ. ತಲೆಮೇಲೆ ಹ್ಯಾಟು. ಅದರಿಂದ ಆಚೆ ಬಂದ ನೀಳಕೂದಲು. ನಿತ್ಯಾ ಮೆನನ್ ಅವನ ಬಳಿಗೆ ಹೋದರು. 'ಮೀನು ಹಿಡಿಯುತ್ತಿರುವೆಯಾ?' ಎಂದು ಮೆಲುದನಿಯಲ್ಲಿ ಕೇಳಿದರು. 'ಹೌದು' ಎಂದ ಆ ವ್ಯಕ್ತಿ, ಪಕ್ಕದಲ್ಲಿ ಅದಾಗಲೇ ಹಿಡಿದಿದ್ದ ಕೆಲವು ಮೀನುಗಳಿದ್ದ ಬುಟ್ಟಿ ತೋರಿಸಿದ. ಅಪರಿಚಿತರನ್ನು ಹೀಗೆ ಮಾತಿಗೆಳೆದು, ಅವರು ಏನೆಲ್ಲ ಮಾಡುತ್ತಿದ್ದಾರೆ ಎಂದು ತಿಳಿದುಕೊಳ್ಳುವುದು ನಿತ್ಯಾ ಜಾಯಮಾನ.

ಆ ವ್ಯಕ್ತಿಯ ಇತಿ–ವೃತ್ತಾಂತವನ್ನೆಲ್ಲ ಕೇಳಿದ ಮೇಲೆ, ನಟಿಗೆ ಪ್ರಶ್ನೆ ಎದುರಾಗುವ ಸರದಿ. 'ನೀವು ಏನು ಮಾಡುತ್ತಿರುವಿರಿ' ಎಂದು ಮೀನುಗಾರ ಪ್ರಶ್ನಿಸಿದ. 'ನಾನು ನಟಿ' ಎಂದರು ನಿತ್ಯಾ. 'ಓ... ಅಭಿನಯ... ತುಂಬಾ ಕಷ್ಟದ ಕೆಲಸ' ಎಂದು ಆ ವ್ಯಕ್ತಿ ಪ್ರತಿಕ್ರಿಯಿಸಿದ್ದೇ ನಿತ್ಯಾ ಗುಂಡುಮುಖ ಇನ್ನಷ್ಟು ಅರಳಿತು.

ನಟನೆಯನ್ನು ಕಷ್ಟದ ಕೆಲಸ ಎಂದು ಅದುವರೆಗೆ ಯಾರೂ ಅವರಿಗೆ ಹೇಳಿರಲಿಲ್ಲ. ತಾನು ನಟಿ ಎಂದು ತಿಳಿದವರೆಲ್ಲರಿಂದ ಒಂದು ಏಕತಾನ ಪ್ರತಿಕ್ರಿಯೆ ಬರುವುದನ್ನು ಕಂಡಿದ್ದ ನಿತ್ಯಾ ಅವರಿಗೆ ಯಾರೋ ಒಬ್ಬರಿಗೆ ತಮ್ಮ ಕಷ್ಟ ಗೊತ್ತಾಯಿತಲ್ಲ ಎಂದು ಸಮಾಧಾನವಾಯಿತು.

'ತಿರುಚಿತ್ರಂಬಲಂ' ತಮಿಳು ಸಿನಿಮಾದ ಅಭಿನಯಕ್ಕಾಗಿ ನಿತ್ಯಾ ಅವರಿಗೆ ಶ್ರೇಷ್ಠ ನಟಿ ರಾಷ್ಟ್ರಪ್ರಶಸ್ತಿ ಒಲಿದುಬಂದಿದೆ. ಅವರ ವೃತ್ತಿಬದುಕಿನ ಮೊದಲ ರಾಷ್ಟ್ರಪ್ರಶಸ್ತಿ ಇದು. ಅವರು ಬದುಕನ್ನು ಹೇಗೆಲ್ಲಾ ಪರಿಭಾವಿಸುತ್ತಾರೆ, ಸಾಮಾನ್ಯರ ಜೊತೆಗೂ ಯಾವ ರೀತಿ ಹರಟುತ್ತಾ ಅರಿವಿನ ಪರಿಧಿಯನ್ನು ವಿಸ್ತರಿಸಿಕೊಳ್ಳುತ್ತಾರೆ ಎನ್ನುವುದಕ್ಕೆ ಮೀನುಗಾರ ಹೇಳಿದ ಕಷ್ಟದ ಎಪಿಸೋಡು ಕನ್ನಡಿ ಹಿಡಿಯುತ್ತದೆ.

ರಾಷ್ಟ್ರಪ್ರಶಸ್ತಿ ಬಂದಿರುವುದಕ್ಕೆ ಸಹಜವಾಗಿಯೇ ಖುಷಿಪಟ್ಟಿರುವ ನಿತ್ಯಾ ಅವರಿಗೆ ಇಂತಹ ಪಾತ್ರವನ್ನು ಗುರುತಿಸಿರುವುದಕ್ಕೆ ಇನ್ನಷ್ಟು ಆನಂದವಾಗಿದೆ. ಲಘು ಧಾಟಿಯಲ್ಲಿ ನವಿರು ಸಂಗತಿಗಳನ್ನು ದಾಟಿಸುತ್ತಾ ಹೋಗುವ ಪಾತ್ರಗಳನ್ನು ಸಾಮಾನ್ಯವಾಗಿ ರಾಷ್ಟ್ರಪ್ರಶಸ್ತಿಗೆ ಪರಿಗಣಿಸುವುದಿಲ್ಲ ಎಂಬ ಸಾಮಾನ್ಯೀಕೃತ ಅಭಿಪ್ರಾಯವೊಂದಿದೆ. ಅದನ್ನು ಮುರಿದಂತಹ ಆಯ್ಕೆ ಇದು ಎನ್ನುವುದು ನಿತ್ಯಾ ನಂಬುಗೆ.

ಒಂದೂವರೆ ದಶಕಕ್ಕೂ ಹಿಂದೆ ನಿತ್ಯಾ ಕನ್ನಡದ 'ಜೋಶ್' ಸಿನಿಮಾದಲ್ಲಿ ಎರಡನೇ ನಾಯಕಿಯಾಗಿ ಅಭಿನಯಿಸಿದ್ದರು. ಶಿವಮಣಿ ನಿರ್ದೇಶನದ ಈ ಸಿನಿಮಾದ ಛಾಯಾಚಿತ್ರಗ್ರಾಹಕ ಸಂತೋಷ್ ರೈ ಪಾತಾಜೆ. ಚಿತ್ರ ನೋಡಿದ ಮೇಲೆ ಮಾತಿಗೆ ಸಿಕ್ಕಾಗ ಅವರು, ನಿತ್ಯಾ ಮೆನನ್ ನಯನಾಭಿನಯ ಹಾಗೂ ಮುಗ್ಧತೆಯ ಪಸೆಯೊಂದು ಮುಖದ ಮೇಲೆ ಸದಾ ಇರುವ ರೀತಿಯನ್ನು ಮೆಚ್ಚಿಕೊಂಡಿದ್ದರು. ಆ ನಂತರ ಹಲವು ಭಾಷೆಯ ಸಿನಿಮಾಗಳಲ್ಲಿ ನಿತ್ಯಾ ಅಭಿನಯದ ಛಾಪು ಮೂಡಿಸಿದ್ದಾರೆ.

ಆರು ಭಾಷೆಗಳನ್ನು ಮಾತನಾಡಬಲ್ಲವರು ನಿತ್ಯಾ. ಎದುರಲ್ಲಿ ಕಪ್ಪು, ಬಿಳುಪು, ಕಟ್ಟುಮಸ್ತು, ನೃತ್ಯ ಪ್ರವೀಣ ಎಂತಹುದೇ ನಟರು ಇದ್ದರೂ, ಅಭಿನಯದಲ್ಲಿ ಅವರಿಗೆಲ್ಲ ಸವಾಲೊಡ್ಡುವ ನಟಿಯರ ಪೈಕಿ.

'ತಿರುಚಿತ್ರಂಬಲಂ' ಸಿನಿಮಾದಲ್ಲಿ 'ಮೇಘಂ ಕರುಕಾದ' ಎಂಬ ಹಾಡೊಂದು ಇದೆ. ಅದರಲ್ಲಿ ಕ್ಲೋಸ್‌ಅಪ್ ಶಾಟ್‌ಗಳು ಕಡಿಮೆ. ಕೃಶದೇಹದ ಧನುಶ್ ಲೀಲಾಜಾಲವಾಗಿ ಕೈಕಾಲು ಆಡಿಸುವ ಹಾಡು ಅದು. ಹದತಪ್ಪಿದ ಹಾರ್ಮೋನ್‌ಗಳಿಂದಾಗಿ ನಿತ್ಯಾ ದೇಹತೂಕ ಈಗ ಹೆಚ್ಚಾಗಿದೆ. ಆದರೂ ಅವರು ಹಾಡಿನ ಔಚಿತ್ಯಕ್ಕೆ ತಕ್ಕಂತೆ ನಾಯಕನ ಜೊತೆ ನಿರ್ಭಿಡೆಯಿಂದ ಹೆಜ್ಜೆ ಹಾಕುತ್ತಾರೆ. ಅವರ ಮುಖದ ಭಾವಲಹರಿ ನೋಡುಗರನ್ನು ಅಯಸ್ಕಾಂತದಂತೆ ಎಳೆದುಕೊಳ್ಳುತ್ತದೆ. ನಿತ್ಯಾ ಎಂತಹ ಪರಿಸ್ಥಿತಿಗೂ ಹೇಗೆ ಹೊಂದಿಕೊಳ್ಳಬಲ್ಲರೆನ್ನುವುದಕ್ಕೆ ಇದು ನಿದರ್ಶನ.

'ಅಲಾ ಮೊದಲಾಯಿಂದಿ' ತೆಲುಗು ಚಿತ್ರವನ್ನು ತಮ್ಮ ವೃತ್ತಿಬದುಕಿನ ಟರ್ನಿಂಗ್ ಪಾಯಿಂಟ್ ಎನ್ನುವ ನಿತ್ಯಾ, 'ಕಣ್ಮಣಿ' ತಮಿಳು ಸಿನಿಮಾ ಬಂದಮೇಲೆ ಆದ ಸಕಾರಾತ್ಮಕ ಬದಲಾವಣೆಗಳನ್ನೂ ಉಲ್ಲೇಖಿಸುತ್ತಾರೆ.

ಎಂಟನೇ ವಯಸ್ಸಿನಲ್ಲಿ ಬಾಲನಟಿಯಾಗಿ ಸಣ್ಣ ಪಾತ್ರ ಮಾಡಿದ್ದ ಅವರು, 12ನೇ ವಯಸ್ಸಿನಲ್ಲಿ ಧಾರಾವಾಹಿಯ ಒಂದು ಎಪಿಸೋಡಿನಲ್ಲಿ ಕಾಣಿಸಿಕೊಂಡಿದ್ದರು. ಬೆಂಗಳೂರಿನ ಮೌಂಟ್ ಕಾರ್ಮೆಲ್ ಕಾಲೇಜಿನ ಕಾರಿಡಾರ್‌ಗಳಲ್ಲಿ ಅವರ ಹೆಜ್ಜೆಗುರುತುಗಳಿವೆ.

'ನಿಮಗೆ ನಟಿಯರಿಂದ ಹೇಗೆಲ್ಲ ಹೊಟ್ಟೆಕಿಚ್ಚು ವ್ಯಕ್ತವಾಗುತ್ತದೆ' ಎಂದು ಸಂದರ್ಶನವೊಂದರಲ್ಲಿ ಅವರಿಗೆ ಪ್ರಶ್ನೆ ಎದುರಾಗಿತ್ತು. 'ನನಗೆ ನಟರಿಂದಷ್ಟೆ ಹೊಟ್ಟೆಕಿಚ್ಚಿನ ಭಾವಗಳೆಲ್ಲ ವ್ಯಕ್ತವಾಗಿವೆ. ನಟಿಯರು ಸದಾಕಾಲ ನನ್ನ ಒಳಿತಿಗೆ ಮಿಡಿಯುತ್ತಾ, ಕಷ್ಟಕಾಲದಲ್ಲಿ ಧೈರ್ಯ ತುಂಬುತ್ತಾ ಬಂದಿದ್ದಾರೆ' ಎಂದು ಆಗ, ಅನುಭವ ಆಧರಿಸಿದ ಪ್ರತಿಕ್ರಿಯೆ ನೀಡಿದ್ದರು.

ವಿಜಯ್ ಸೇತುಪತಿ ಜೊತೆಯಲ್ಲಿ ಅಪರೂಪದ ವಸ್ತುವೊಂದರ ಸಿನಿಮಾ ಕೆಲಸದಲ್ಲಿ ತೊಡಗಿರುವ ನಿತ್ಯಾ ಅವರಿಗೆ ಪ್ರಶಸ್ತಿಯ ಪುಳಕವನ್ನು ಹೆಚ್ಚು ಆಸ್ವಾದಿಸಲು ತೂಕಡಿಕೆ ಅಡ್ಡ ಬರುತ್ತಿತ್ತಂತೆ. ಯಾಕೆಂದರೆ, ಪ್ರಶಸ್ತಿ ಪ್ರಕಟವಾಗುವ ಕೆಲವು ದಿನಗಳಿಂದ ಅವರು ದಿನವೂ ಸರಾಸರಿ ಎರಡು ತಾಸು ಅಷ್ಟೇ ಮಲಗಲು ಸಾಧ್ಯವಾಗಿರುವುದು.

ಪ್ರತಿಕ್ರಿಯಿಸಿ: feedback@sudha.co.in